ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : ೩೬೦೩

ಸದಸ್ಯರ ಹೆಸರು : ಶ್ರೀ ಚನ್ನಬಸವರಾಜ್ (ಅಫ್ಜಲ್‌ಪುರ)
ಶ್ರೀ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ)

ಉತ್ತರಿಸುವ ಸಚಿವರು : ಶ್ರೀ ಹೆಚ್.ಡಿ. ರೇವಣ್ಣ
(ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಕ್ರ.ಸಂ. ಪ್ರಶ್ನೆ

(ಅ) ಆಲಮಟ್ಟಿ ಅಣೆಕಟ್ಟಿನ ವಿದ್ಯುತ್ ಉತ್ಪಾದನಾ ಘಟಕದ ಒಟ್ಟು ಸಾಮರ್ಥ್ಯ ಎಷ್ಟು?

ಉತ್ತರ

ಒಟ್ಟು ಸಾಮರ್ಥ್ಯ : ೨೯೦ ಮೆ.ವ್ಯಾ.
೧೫೦ ಮೆ.ವ್ಯಾ. ನ ೧ ಘಟಕ, ೫೦ ಮೆ.ವ್ಯಾ. ನ ೫ ಘಟಕಗಳು

ಕ್ರ.ಸಂ. ಪ್ರಶ್ನೆ

(ಆ) ಪ್ರಸ್ತುತ ಎಷ್ಟು ಮೆಗಾವ್ಯಾಟ್ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲಾಗುತ್ತಿದೆ.

ಉತ್ತರ

೧೫೦ ಮೆ.ವ್ಯಾ. ಸಾಮರ್ಥ್ಯದ ಮೊದಲನೇ ಘಟಕ, ತಲಾ ೫೦ ಮೆ.ವ್ಯಾ. ಸಾಮರ್ಥ್ಯದ ಎರಡನೇ ಮತ್ತು ಮೂರನೇ ಘಟಕಗಳ ಕಾರ್ಯಾರಂಭವಾಗಿದೆ. ೫೦ ಮೆ.ವ್ಯಾ.ನ ನಾಲ್ಕನೇ ಘಟಕದ ಯಾಂತ್ರಿಕ ಚಾಲನೆ ಮುಗಿದಿದೆ. ಆಲಮಟ್ಟಿ ಜಲಾಶಯದ ಈಗಿನ ನೀರು ಸಂಗ್ರಹಣೆಗನುಗುಣವಾಗಿ ೧೫೦ ಮೆ.ವ್ಯಾ. ಸಾಮರ್ಥ್ಯದ ಮೊದಲನೇ ಘಟಕ ಮಾತ್ರ ಕಾರ್ಯನಿರ್ವಹಿಸುತ್ತಿದೆ.

ಕ್ರ.ಸಂ. ಪ್ರಶ್ನೆ

(ಇ) ಬಿಜಾಪುರ ಜಿಲ್ಲೆಗೆ ಆಲಮಟ್ಟಿಯಿಂದ ಎಷ್ಟು ಮೆಗಾವ್ಯಾಟ್ ವಿದ್ಯುಚ್ಛಕ್ತಿಯನ್ನು ಒದಗಿಸಲಾಗುವುದು?

ಉತ್ತರ

ಆಲಮಟ್ಟಿಯಿಂದ ಉತ್ಪಾದನೆಗೊಳ್ಳುವ ವಿದ್ಯುತ್ ಗ್ರಿಡ್‌ಗೆ ಸೇರ್ಪಡೆಗೊಳ್ಳುವುದರಿಂದ ಬಿಜಾಪುರ ಜಿಲ್ಲೆಗೆ ಆಲಮಟ್ಟಿಯಿಂದ ಪ್ರತ್ಯೇಕವಾಗಿ ವಿದ್ಯುಚ್ಛಕ್ತಿಯನ್ನು ನಿಖರವಾಗಿ ಹಂಚಿಕೆ ಮಾಡಲು ಬರುವುದಿಲ್ಲ. ಆದಾಗ್ಯೂ

ಇಲ್ಲಿ ಉತ್ಪಾದನೆಯಾಗುವ ವಿದ್ಯುತ್ ಬಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಿಗೆ ಉಪಯೋಗಿಸಲ್ಪಡುತ್ತಿದೆ. ಒಂದು ವೇಳೆ ಆಲಮಟ್ಟಿಯಲ್ಲಿ ಕಡಿಮೆ ಉತ್ಪಾದನೆ ಆದಲ್ಲಿ ಅಥವಾ ಉತ್ಪಾದನೆ ಸ್ಥಗಿತಗೊಂಡಲ್ಲಿ, ಬಜಾಪುರ ಜಿಲ್ಲೆಗೆ ಆರ್.ಟಿ.ಪಿ.ಎಸ್. ನಾಗಝರಿ ಮುಂತಾದ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ ವಿದ್ಯುತ್ ಒದಗಿಸಲಾಗುತ್ತಿದೆ.

ಪ್ರಶ್ನೆಯ ಸಂಖ್ಯೆ : ೬೬೦೩
ಉತ್ತರ ಲಗತ್ತಿಸಿದೆ

ಶ್ರೀ ಬಸವರಾಜ ರಾಯರೆಡ್ಡಿ (ಶ್ರೀ ಚೆನ್ನಬಸವರಾಜ (ಅಪ್ಪಾಜಿ) ಶಂಕರರಾವ್ ನಾಡಗೌಡ ರವರ ಪರವಾಗಿ: ಮಾನ್ಯ ಅಧ್ಯಕ್ಷರೆ, ಆಲಮಟ್ಟಿ ಅಣೆಕಟ್ಟಿನಿಂದ ೨೯೦ ಮೆ.ವ್ಯಾಟ್ ವಿದ್ಯುತ್ ಉತ್ಪಾದನೆಯಾಗಬೇಕು. ಆದರೆ, ಅವರ ಉತ್ತರದ ಪ್ರಕಾರ ಮೊದಲನೆಯ ಘಟಕದಲ್ಲಿ ೧೫ ಮೆ.ವ್ಯಾಟ್. ಎರಡನೆಯ ಮತ್ತು ಮೂರನೇ ಘಟಕಗಳಿಂದ ತಲಾ ೫೫ ರಂತೆ ಮೂರೂ ಘಟಕಗಳಿಂದ ಒಟ್ಟು ೧೭೫ ಮೆ.ವ್ಯಾಟ್ ವಿದ್ಯುತ್ ಉತ್ಪಾದನೆಯಾಗಬೇಕು. ಆದರೆ, ಉತ್ತರದಲ್ಲಿ ಆಲಮಟ್ಟಿ ಜಲಾಶಯದಲ್ಲಿ ನಿಗದಿತ ನೀರಿನ ಸಂಗ್ರಹಣೆ ಇಲ್ಲದಿರುವುದರಿಂದ ಕೇವಲ ೧೫ ಮೆ.ವ್ಯಾಟ್ ವಿದ್ಯುತ್‌ನ್ನು ಉತ್ಪಾದನೆ ಮಾಡುತ್ತೇವೆಂದು ಹೇಳುತ್ತಾರೆ. ಆಲಮಟ್ಟಿ ಜಲಾಶಯದಲ್ಲಿ ನೀರಿನ ಸಂಗ್ರಹಣೆ ಇದೆಯೋ? ಇಲ್ಲವೋ? ನಾವೇನು ನಿಗದಿಪಡಿಸಿದ್ದೇವೆ ಅಷ್ಟು ನೀರು ಇದೆಯೋ ಇಲ್ಲವೋ ಎಂಬ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕು. ಈ ಮಾತನ್ನು ಏಕೆ ಹೇಳುತ್ತೇನೆಂದರೆ, ಈ ವರ್ಷ ಮಳೆಯಾಗಿದೆ, ಎಲ್ಲಾ ಅಣೆಕಟ್ಟು ಭರ್ತಿಯಾಗಿದೆ. ಆದರೆ ನೀರಿಲ್ಲವೆಂಬ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಆಲಮಟ್ಟಿ ಅಣೆಕಟ್ಟೆಯಲ್ಲಿ ಈಗ ಕೇವಲ ೧೫ ಮೆ.ವ್ಯಾಟ್ ವಿದ್ಯುತ್ ಉತ್ಪಾದನೆ ಮಾಡುವಷ್ಟು ಮಾತ್ರ ನೀರಿದೆ. ಈಗ ಚಾಲ್ತಿ ೧೪೦ ಮೆ.ವ್ಯಾಟ್‌ಗೆ ಎಲ್ಲಾ ರೆಡಿ ಇದೆ. ಆದರೆ ಈಗ ೧೫ ಮೆ.ವ್ಯಾಟ್ ಉತ್ಪಾದನೆ ಮಾಡುವಷ್ಟು ಮಾತ್ರ ನೀರು ಇರುವುದರಿಂದ ೧೫ ಮೆ.ವ್ಯಾಟ್ ವಿದ್ಯುತ್ ಮಾತ್ರ ಉತ್ಪಾದನೆಯಾಗುತ್ತಿದೆ. ಡ್ಯಾಂನಲ್ಲಿ ನೀರಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ: ಅದಕ್ಕೆ ನಾನು ಏನು ನೀರಿನ ಸಂಗ್ರಹಣೆ ಎಷ್ಟಕ್ಕೆ ನಿಂತಿದೆ? ಎಷ್ಟು ಮೀಟರ್ ನೀರಿದೆ? ಎಂದು ಕೇಳುತ್ತಿದ್ದೇನೆ. ಏಕೆಂದರೆ ನನಗೆ ಗೊತ್ತಿರುವ ಪ್ರಕಾರ ಆಲಮಟ್ಟಿ ಜಲಾಶಯ ಭರ್ತಿಯಾಗಿದೆ. ೫೧೨ ಮೀಟರ್ ನೀರು ಫುಲ್ ಇದೆ.

ಹಾಗಿರುವಾಗ ನೀರಿಲ್ಲವೆಂದರೆ ಕಾರಣವೇನು? ಆ ನೀರು ಎಲ್ಲಿ ಹೋಯಿತು?

ಶ್ರೀ ಹೆಚ್.ಡಿ. ರೇವಣ್ಣ : ಅವರೇನು ಪ್ರಶ್ನೆ ಕೇಳಿದ್ದಾರೆ ಅದಕ್ಕೆ ಉತ್ತರವನ್ನು ಕೊಟ್ಟಿದ್ದೇನೆ. ಉಪಪ್ರಶ್ನೆಯನ್ನು ಹಾಕಿದರೆ ಬೇಕಾದರೆ ಅದಕ್ಕೆ ಉತ್ತರವನ್ನು ಕೊಡಿಸುತ್ತೇನೆ. ನೀರು ಡ್ಯಾಂನಲ್ಲಿ ಇದೆಯೋ ಎಂಬ ಬಗ್ಗೆ ಬೇಕಾದರೆ ನೀರಾವರಿ ಸಚಿವರಿದ್ದಾರೆ. ಹೇಳುತ್ತೇನೆ. ನಾನೇ ತರಿಸಿಕೊಡಬೇಕೆಂದರೆ ತರಿಸಿಕೊಡುತ್ತೇನೆ. ಇಲ್ಲದಿದ್ದರೆ ನೀರಾವರಿ ಸಚಿವರಿದ್ದಾರೆ ಅವರು ಕೊಡುತ್ತಾರೆ. ನಮ್ಮ ಅಧಿಕಾರಿಗಳು ಕೊಟ್ಟಿರುವ ಮಾಹಿತಿಯ ಪ್ರಕಾರ ೧೫ ಮೆ.ವ್ಯಾಟ್ ವಿದ್ಯುತ್ ಉತ್ಪಾದನೆ ಮಾಡುವಷ್ಟು ಮಾತ್ರ ನೀರಿದೆ. ಬಾಕಿ ಘಟಕವನ್ನು ಚಾಲನೆ ಮಾಡುತ್ತಿಲ್ಲ, ನೀರು ಬಂದಮೇಲೆ ಅದನ್ನೂ ಚಾಲನೆ ಮಾಡುತ್ತೇವೆ.